# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 1158/2023

**ಚಾಸಾ–6 ಪ್ರಾಸಾ–6**

| | | |
|---|---|---|
| ಹೆಸರು | – | ವಿನಯ್ ಕುಮಾರ್ |
| ತಂದೆಯ ಹೆಸರು | – | ರುದ್ರಪ್ಪ |
| ವಯಸ್ಸು | – | 30 ವರ್ಷ |
| ವೃತ್ತಿ | – | ಖಾಸಗಿ |
| ವಾಸಸ್ಥಳ | – | ಕಚ್ಚಿಗೆಬೈಲು |

(ದಿನಾಂಕಃ **31.10.2025** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 04.02.2023 ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ನಮ್ಮ ಬ್ಯಾಂಕಿನಲ್ಲಿ ಕಳ್ಳತನ ಆಗಿರುತ್ತದೆ ಎಂದು ತಿಳಿದಿರುತ್ತದೆ. ನಾನು 8 ಗಂಟೆ ಸಮಯದಲ್ಲಿ ಬ್ಯಾಂಕಿಗೆ ಬಂದಿರುತ್ತೇನೆ.

2. ಪೊಲಿಸರು ನನ್ನನ್ನು ಪಂಚರಾಗಿ ಬರುವಂತೆ ಕರೆದಿರುತಾರೆ. ಸುಮಾರು 11 ರಿಂದ 12 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಘಾಟನಾ ಸ್ಥಳದಿಂದ ಹಾರೆ ಕೋಲು, ಬ್ಯಾಂಕಿನ ಚಿಲಕಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಎಂ.ಒ 1 ಮತ್ತು ಎಂ.ಒ 2 ಎಂದು ಗುರುತಿಸ್ಪಟ್ಟಿರುತ್ತವೆ.

3. ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ, ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ2 ಎಂದು ಗುರುತಿಸಲ್ಪಟ್ಟಿರುತ್ತದೆ,

ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು.

4. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕಚ್ಚಾನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ3 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ3(ಬಿ) ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಎರಡು ಭಾವ ಚಿತ್ರಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಪಂಚನಾಮೆ ಕಾಲಕ್ಕೆ ತೆಗೆದಿದ್ದು ಆದರೆ ನ್ಯಾಯಾಲಯದ ಮುಂದೆ ಫೋಟೋಗಳ ಪೇಪರ್ ಇರುವುದರಿಂದ ನಿಶಾನೆಗೆ ಒಳಪಡಿಸಿರುವುದಿಲ್ಲ.

6. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಆರೋಪಿಯು ಕೃತ್ಯ ನಡೆದ ಸ್ಥಳ ತೋರಿಸಿದ ಪಂಚನಾಮೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ4 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ4(ಎ) ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಆರು ಭಾವ ಚಿತ್ರಗಳನ್ನು ತೋರಿಸಿದ್ದು ಅವುಗಳಲ್ಲಿನ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಮತ್ತು ಅವು ಒರಿಜಿನಲ್ ಫೋಟೋ ಆಗದೇ ಇರುವುದರಿಂದ ನಿಶಾನೆಗೆ ಒಳಪಡಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ಆರೋಪಿ ಕಳ್ಳತನ ಮಾಡಿದ ಜಾಗವನ್ನು ಚಾಸ 1 ರವರು ತೋರಿಸಿರುತ್ತಾರೆ ಎಂದು ಸೂಚಿಸಿದರೆ ಸರಿ. ಸದರಿ ಪಂಚನಾಮೆಯನ್ನು ಬೆಳಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತಾರೆ ಎಂದು ಸೂಚಿಸಿದರೆ ಸರಿ. ಅದನ್ನು ಅಲ್ಲೇ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿ

ಪ್ರಿಂಟ್ ತೆಗೆದಿರುತ್ತಾರೆ ಎಂದರೆ ಸರಿ. ಅದರ ಮಾಹಿತಿ ಮತ್ತು ಚಕ್ಕುಬಂದಿಯನ್ನು ನಾವೇ ಹೇಳಿ ತಿಳಿಸಿರುತ್ತೇವೆ ಎಂದರೆ ಸರಿ.

2. ಆ ದಿನ ಪೊಲಿಸರು ಬೆಳಗ್ಗೆ 9.15 ರಿಂದ 10.15 ರವರೆಗೆ ಆರೋಪಿಯು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ್ದು ಅಲ್ಲಿ ಪೊಲಿಸರು ನಮ್ಮ ಸಮಕ್ಷಮ ನಿಪಿ4 ರಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಅಲ್ಲಿ ನಾವು ಆರೋಪಿಯನ್ನು ನೋಡಿರುತ್ತೇವೆ. ಈಗಲೂ ಸಹ ಅರೋಪಿಯನ್ನು ನೊಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ಕಲಂ 317 ರ ಅರ್ಜಿಯೊಂದಿಗೆ ಮೆಮೊ ಆಫ್ ಅಂಡರ್ ಟೇಕಿಂಗ್ ಅನ್ನು ನೀಡಿದ್ದು ಅದನ್ನು ಷರತ್ತಿನೊಂದಿಗೆ ಅಂಗೀಕರಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿ.ಹೆಚ್ ರವರಿಂದಃ**

1. ನಮ್ಮ ಬ್ಯಾಂಕಿಗೆ ಮತ್ತು ನಮ್ಮ ಮನೆಯ ಮಧ್ಯ ಸಮಾರು 10 ಕಿ.ಮೀ ಅಂತರ ಇರುತ್ತವೆ. ನಮ್ಮ ಬ್ಯಾಂಕಿನ ಸುತ್ತ ಮುತ್ತ ವಾಸದ ಮನೆಗಳು ಇರುತ್ತವೆ ಎಂದು ಸೂಚಿಸಿದರೆ ಸರಿ. ನಮ್ಮ ಬ್ಯಾಂಕಿನಲ್ಲಿ ಸಿಸಿ ಕ್ಯಾಮೇರಾ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಬ್ಯಾಂಕಿನಲ್ಲಿ ಕಾವಲುಗಾರರು ಇರುವುದಿಲ್ಲ.

2. ಬ್ಯಾಂಕಿನ ಕೀಲಿಯನ್ನು ಹಾಕುವುದು ಅಟೆಂಡರ್ ಮತ್ತು ವ್ಯವಸ್ಥಾಪಕರು ಮಾಡುತ್ತಾರೆ. ನಾನು ಘಟನಾ ಸ್ಥಳಕ್ಕೆ ಬಂದಾಗ ಸಮಯ ಸುಮಾರು 8.30 ಆಗಿರುತ್ತದೆ. ನಾನು ಪಂಚನಾಮೆಯನ್ನು ಹೇಳಿ ಬರೆಸಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

3. ಸದರಿ ಪಂಚನಾಮೆಯನ್ನು ಅಂದಾಜು 11 ರಿಂದ 12 ಗಂಟೆಯಲ್ಲಿ ಜರುಗಿಸಿರುತ್ತಾರೆ. ನನಗೆ ಘಟನಾ ಸ್ಥಳದ ಚಕ್ಕುಬಂದಿ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಎಂ.ಒ 1 ಮತ್ತು 2 ರ ಸ್ವರೂಪವನ್ನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

4. ನ್ಯಾಯಾಲಯದ ಮುಂದೆ ಇರುವ ಎಂ.ಒ 1 ಮತ್ತು 2 ಬ್ಯಾಂಕಿನ ಸ್ಟೇರ್ ಕೇಸ್ ಮೇಲೆ ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಎಂ.ಒ 1 ಮತ್ತು 2 ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು

ಎಂ.ಓ 1 ಮೇಲೆ ಯಾವುದೇ ವಿಶೇಷ ಗುರುತು ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಅದು ಬಾಗಿದ್ದರಿಂದ ಅದನ್ನು ಗುರುತಿಸಬಹುದು ಎಂದು ನುಡಿಯುತ್ತಾರೆ.

5. ನಮ್ಮ ಬ್ಯಾಂಕಿನಲ್ಲಿ ಯಾವುದೇ ವಸ್ತುಗಳು ಹಣ ಕಳ್ಳತನ ಆಗಿರುವುದಿಲ್ಲ ಮತ್ತು ಜಖಂ ಆಗಿರುವುದಿಲ್ಲ ಎಂದು ಸೂಚಿಸಿದರೆ ಸರಿ. ನಾನು ಘಟನಾ ಸ್ಥಳಕ್ಕೆ ಪಂಚರಾಗಿ ಹೋಗಿರುವುದಿಲ್ಲ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಉಪಸ್ಥಿತ ಇರುವುದಿಲ್ಲ ನಮ್ಮ ಸಮಕ್ಷಮ ಪೊಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

6. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಓ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.